ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| **ಮಡಿಮೈಲಿಗೆ — 3** | **2** |
| **ಪಾಪ ಮಾಡಿದವರು ಮಡಿಯಾಗುವದೇ ಇಲ್ಲ** | **2** |
| **ಪ್ರಾಯಶ್ಚಿತ್ತಕಾಲದ ಮಡಿ** | **8** |
| **ದೇಹವನ್ನು ಮಡಿ ಮಾಡುವ ಪ್ರಕ್ರಿಯೆ** | **11** |

## ಮಡಿಮೈಲಿಗೆ — 3

### ಪಾಪ ಮಾಡಿದವರು ಮಡಿಯಾಗುವದೇ ಇಲ್ಲ

ಮಡಿಯಲ್ಲಿ ಮನಸ್ಸಿನ ಶುದ್ಧಿಯೇ ಪ್ರಧಾನ. ಅದಿಲ್ಲದಿದ್ದರೆ ಮಡಿಯಾಗಲು ಸಾಧ್ಯವೇ ಇಲ್ಲ. ದೇಹದ ಶುದ್ಧಿ ಆ ನಂತರದ್ದು.

ಒಂದು ತಂಬಿಗೆಯಲ್ಲಿ ನೀರನ್ನು ತುಂಬಬೇಕಾದರೆ ತಂಬಿಗೆಯ ಒಳಗೂ ಶುದ್ಧಿಯಿರಬೇಕು, ತಂಬಿಗೆಯ ಹೊರಗೂ ಶುದ್ಧಿಯಿರಬೇಕು. ತಂಬಿಗೆಯ ಒಳಗೆ ಕೊಳೆಯಿದ್ದರೆ ನೀರನ್ನು ಕುಡಿಯಲು ಸಾಧ್ಯವೇ ಇಲ್ಲ. ತಂಬಿಗೆಯ ಹೊರಗಡೆ ಕೊಳೆಯಿದ್ದರೆ ಒಳಗೆಷ್ಟು ಶುದ್ಧಿಯಿದ್ದರೂ ಉಪಯೋಗವಿಲ್ಲ, ಅದರಲ್ಲಿನ ನೀರು ಕುಡಿಯಲು ಮನಸ್ಸಾಗುವದಿಲ್ಲ.

ಮಡಿಯ ವಿಷಯದಲ್ಲಿಯಂತೂ ಈ ಮಾತು ನಮಗೆ ತುಂಬ ಚನ್ನಾಗಿ ಅರ್ಥವಾಗಬೇಕು. ಸ್ನಾನ ಮಾಡಿದ ಮಾತ್ರಕ್ಕೆ ನಾವು ಮಡಿಯಲ್ಲ. ಗಂಗಾ-ಗೋದಾವರಿ-ಕೃಷ್ಣಾ-ಕಾವೇರಿ ಮುಂತಾದ ಯಾವ ತೀರ್ಥದಲ್ಲಿ ಸ್ನಾನ ಮಾಡಿದರೂ ಮನಸ್ಸಿನಲ್ಲಿ ಕಾಮ ಕ್ರೋಧಗಳು ತುಂಬಿದ್ದರೆ ಶುದ್ಧಿಯಾಗಲು ಸಾಧ್ಯವೇ ಇಲ್ಲ.

ಈ ಮಾತನ್ನು ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರೇ ತಿಳಿಸಿದ್ದಾರೆ — **"ಮಲಿನಾನಿ ಮನಾಂಸಿ ಕುತಃ ಕರಣಮ್?"** ಮಲಿನವಾದ ಮನಸ್ಸು ಪರಮಾತ್ಮನ ಪೂಜೆಗೆ ಉಪಯೋಗ ಬೀಳುವ ಸಾಧನವಾಗಲು ಸಾಧ್ಯವೇ?

ಶ್ರೀ ವಿದ್ಯಾಧಿರಾಜಗುರುಸಾರ್ವಭೌಮರ ವಾಕ್ಯಗಳನ್ನು ಹಿಂದಿನ ಲೇಖನದಲ್ಲಿ ತಿಳಿದಿದ್ದೇವೆ. [VNA097]

ಶ್ರೀಪುರಂದರದಾಸರು ಹೇಳುವಂತೆ — "ಮಿಂದು ಫಲವೇನು, ಮೀನು ಮೊಸಳೆಗಳಂತೆ?" ಜಲಚರಪ್ರಾಣಿಗಳು ಗಂಗಾದಿ ಶ್ರೇಷ್ಠನದಿಗಳ

ನೀರಿನಲ್ಲಿಯೇ ಯಾವಾಗಲೂ ಮುಳುಗಿರುತ್ತವೆ. ಆದರೆ, ಅದರಿಂದ ಅವಕ್ಕೇನಾದರೂ ಫಲವಿದೆಯೇ? ಇಲ್ಲ. ಕಾರಣವೇನು? ಅವಕ್ಕೆ ತೀರ್ಥದ ಸ್ನಾನದ ರೀತಿ ಗೊತ್ತಿಲ್ಲ. ಹೀಗೆ, ಯಾರಿಗೆ ತನ್ನಲ್ಲಿ, ತೀರ್ಥದಲ್ಲಿ, ಮತ್ತು ಸ್ನಾನದ ಪ್ರಕ್ರಿಯೆಯಲ್ಲಿ ಪರಮಾತ್ಮನ ಸನ್ನಿಧಾನದ ಅರಿವಿದೆಯೋ ಆಂತಹವರಿಗೆ ಮಾತ್ರ ಗಂಗಾಸ್ನಾನದ ಫಲ, ಸ್ನಾನದಿಂದ ಮಡಿ.

ದೇಹ ಕೊಳೆಯಾದರೆ ಅದನ್ನು ಸ್ನಾನದಿಂದ ಶುದ್ಧ ಗೊಳಿಸಿಬಿಡಬಹುದು. ನಾವು ಹಿಂದಿನ ಲೇಖನದಲ್ಲಿ [VNA097] ತಿಳಿದಂತೆ ಮನಸ್ಸಿನಲ್ಲಿ ಮೈಲಿಗೆಯಿದ್ದರೆ ಅದಕ್ಕೆ ಪ್ರಾಯಶ್ಚಿತ್ತವೇ ಪರಿಹಾರ. ಕೆಲವು ಮೈಲಿಗೆಗಳಿಗಂತೂ ಪ್ರಾಯಶ್ಚಿತ್ತವೇ ಇಲ್ಲ.

ಹೀಗಾಗಿ ಮಡಿಯಾಗಬೇಕಾದರೆ ಮೊದಲು ಮನಸ್ಸು ಶುದ್ಧವಾಗಿರಬೇಕು. ನಮ್ಮ ಕ್ರಿಯೆಗಳು ಶುದ್ಧವಾಗಿರಬೇಕು. ನಮ್ಮ ಕಚ್ಚೆ ಶುದ್ಧವಾಗಿರಬೇಕು. ನಮ್ಮ ನಾಲಿಗೆ ಶುದ್ಧವಾಗಿರಬೇಕು. ನಮ್ಮ ಕೈಗಳು ಶುದ್ಧವಾಗಿರಬೇಕು. ಮತ್ತೊಬ್ಬರಿಗೆ ಹಿಂಸೆ ಮಾಡದ, ಹಾದರ ಮಾಡದ, ಸುಳ್ಳು ಹೇಳದ, ಕಳ್ಳತನ

ಕೊಲೆ ಮಾಡದ ಮನುಷ್ಯ ಮಾತ್ರ ಮಡಿಯಾಗಲು ಸಾಧ್ಯ. ಯಾರಾದರೂ ಸಹ ಇಂತಹ ಪಾತಕಗಳನ್ನು ಮಾಡಿಯೂ  ತಾವು ಶುದ್ಧರು ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದರೆ, ಅವರನ್ನು ದಾಂಭಿಕರು ಎಂದೇ ತಿಳಿಯಬೇಕು ಎನ್ನುತ್ತಾರೆ ಶ್ರೀಮದಾಚಾರ್ಯರು ಗೀತಾಭಾಷ್ಯದಲ್ಲಿ  — **ದಾಂಭಿಕತ್ವೇನ ಸಃ ಅನುಮೇಯಃ** ಎಂದು.

ಹೀಗಾಗಿ ಮೊದಲು ಮನಸ್ಸು ಮಡಿಯಾಗಬೇಕು. ಆ ಬಳಿಕವೇ ದೇಹ ಮಡಿಯಾಗಲು ಸಾಧ್ಯ.

ಇಷ್ಟು ಹೇಳಿದ ಮೇಲೆ ಮತ್ತೊಂದು ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಮೂಡುತ್ತದೆ — ಪಾಪ ಮಾಡಿದ ಬ್ರಾಹ್ಮಣ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ಹೇಳುತ್ತೀರಿ. ಪ್ರಾಯಶ್ಚಿತ್ತ ಎಂದರೆ ಸತ್ಕರ್ಮಗಳು. ಅವುಗಳನ್ನು ಮಾಡಬೇಕಾದರೆ ಮಡಿಯಾಗಬೇಕು. ಅವನ ಮನಸ್ಸು ದೇಹ ಎರಡೂ ಕಲುಷಿತಗೊಂಡಿವೆ. ಹೀಗಾಗಿ ಅವನು ಮಡಿಯಾಗಲಾರ. ಮಡಿಯಾಗದೇ ಪ್ರಾಯಶ್ಚಿತ್ತ ಮಾಡಿಕೊಳ್ಳಲಾರ, ಪ್ರಾಯಶ್ಚಿತ್ತ ಮಾಡಿಕೊಳ್ಳದೇ

ಉದ್ಧಾರವಾಗಲಾರ. ಈ ಸಮಸ್ಯೆಗೆ ಪರಿಹಾರವೇನು?

ಇದಕ್ಕೆ ಒಂದು ದೃಷ್ಟಾಂತದ ಮುಖಾಂತರವೇ ಉತ್ತರ ನೀಡುತ್ತೇನೆ —

ಒಬ್ಬ ಬ್ರಾಹ್ಮಣ ತನ್ನ ಅಯೋಗ್ಯತನದಿಂದ ಒಬ್ಬ ಅಬಲೆಯಾದ ಶೂದ್ರಸ್ತ್ರೀಯನ್ನು ಕೂಡಿದ್ದಾನೆ. ನಮ್ಮ ಶಾಸ್ತ್ರ ಸ್ತ್ರೀ ಮತ್ತು ಶೂದ್ರರನ್ನು ತುಂಬ ಕಾಳಜಿಯಿಂದ ರಕ್ಷಿಸುತ್ತದೆ. ಶೂದ್ರರಿಗೆ ಧಣಿಗಳ ವಿರುದ್ಧ ಧ್ವನಿಯೆತ್ತಿ ಮಾತನಾಡುವ ಧೈರ್ಯವಿರುವದಿಲ್ಲ. ಹೀಗಾಗಿ **ಒಬ್ಬ ಬ್ರಾಹ್ಮಣ ಒಬ್ಬ ಶೂದ್ರ ಹೆಣ್ಣುಮಗಳ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಂಡು ಅವಳನ್ನು ಕೂಡಿದ ಎಂದರೆ ಮುಂದಿನ ಘಳಿಗೆಯಿಂದ ಅವನು ಬ್ರಾಹ್ಮಣನೇ ಅಲ್ಲ ಎಂದು ಉದ್ಘೋಷಿಸುತ್ತದೆ ನಮ್ಮ ಶಾಸ್ತ್ರ. "ಶೂದ್ರಾಂ ಶಯನಮಾರೋಪ್ಯ ಬ್ರಾಹ್ಮಣ್ಯಾದೇವ ಹೀಯತೇ"** ಅವನಿಗೆ ಸಂಧ್ಯಾವಂದನೆ ಮಾಡಲೂ ಅರ್ಹತೆ ಇಲ್ಲ. ಹೀಗಾಗಿ ಅವನು ಸಂಧ್ಯಾವಂದನೆ ಮುಂತಾದ

ಕರ್ಮಗಳಿಗೆ ಅರ್ಹನೇ ಅಲ್ಲವಾದ್ದರಿಂದ ಅದಕ್ಕಾಗಿ ಮಡಿಯೂ ಅಗಲೂ ಸಾಧ್ಯವಿಲ್ಲ.

ಇಂತಹವರು ಲೋಕದಲ್ಲಿ ದೊಡ್ಡ ಸ್ಥಾನದಲ್ಲಿರುವವರ ಸಂಗಡವೇ ಇರುತ್ತಾರೆ. ದೊಡ್ಡದೊಡ್ಡ ಸ್ವಾಮಿಗಳೂ, ಅವರ ತಪ್ಪನ್ನು ತಿಳಿದೂ, ಅವರನ್ನು ಮಡಿಗೆ ತೆಗೆದುಕೊಳ್ಳುತ್ತಾರಲ್ಲಾ, ದೊಡ್ಡ ಸ್ಥಾನದಲ್ಲಿರುವವರೂ ಸಹ ಇಂತಹ ತಪ್ಪುಗಳನ್ನು ಮಾಡುತ್ತಾರಲ್ಲಾ ಎಂಬ ಪ್ರಶ್ನೆಗೆ ಉತ್ತರ ಹೀಗಿದೆ —

ಒಬ್ಬ ವ್ಯಕ್ತಿ ತಪ್ಪು ಮಾಡಿದ್ದಾನೆ, ಪ್ರಾಯಶ್ಚಿತ್ತ ಮಾಡಿಕೊಂಡಿಲ್ಲ ಎಂದು ನಿಮಗೆ 'ನಿರ್ಣಯ'ವಿದ್ದರೆ ಅವಶ್ಯವಾಗಿ ಆ ವ್ಯಕ್ತಿಯಿಂದ ದೂರವಿರಿ. ಇನ್ನು ಆ ವ್ಯಕ್ತಿ ದೊಡ್ಡ ಸ್ಥಾನದಲ್ಲಿದ್ದಾನೆ, ಅಥವಾ ದೊಡ್ಡ ಸ್ಥಾನದಲ್ಲಿರುವವರೂ ಅವನನ್ನು ಮಡಿಗೆ ತೆಗೆದುಕೊಳ್ಳುತ್ತಾರೆ ಎಂತಾದರೆ ಅದೂ ಸಹ ಅವಶ್ಯವಾಗಿ ತಪ್ಪೇ.

ಶಾಸ್ತ್ರದ ಮಾತನ್ನು ಮೀರಿ ಅವನು ಸತ್ಕರ್ಮಗಳನ್ನು ಅನುಷ್ಠಾನ ಮಾಡಿದರೂ ಅದರಿಂದ ಏನೂ

ಫಲವಿಲ್ಲ. ತಾನು ಮಾಡಿದ ಪಾಪ ತಿಳಿದೂ ಪ್ರಾಯಶ್ಚಿತ್ತ ಮಾಡಿಕೊಳ್ಳದೇ ಕರ್ಮಗಳ ಅನುಷ್ಠಾನ ಮಾಡುವ ಮನುಷ್ಯನನ್ನು ದಾಂಭಿಕ ಎಂದೇ ಕರೆಯಬೇಕು ಎಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ.

ಹೀಗಾಗಿ ಇಂತಹ ದಾಂಭಿಕರಿಂದ ದೂರವಿರುವದರಿಂದಲೇ ನಮಗೆ ಸಾಧನೆಯಾಗುತ್ತದೆ.

## ಪ್ರಾಯಶ್ಚಿತ್ತಕಾಲದ ಮಡಿ

**ಇನ್ನು ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಬೇಕಾದರೆ ಅನುಸರಿಸಬೇಕಾದ ಮಡಿಯ ಕುರಿತು ತಿಳಿಯೋಣ.**

ಇದೇ ದುಷ್ಕರ್ಮಕ್ಕೆ ಶಾಸ್ತ್ರದಲ್ಲಿ ಹೀಗೆ ಪ್ರಾಯಶ್ಚಿತ್ತವನ್ನು ಹೇಳಿದ್ದಾರೆ —

**ಯತ್ ಕರೋತ್ಯೇಕರಾತ್ರೇಣ**
**ವೃಷಲೀಸೇವನಾದ್ ದ್ವಿಜಃ ।**

**ತದ್ ಭೈಕ್ಷಭುಗ್ ಜಪನ್ನಿತ್ಯಂ**
**ತ್ರಿಭಿರ್ವರ್ಷೈರ್ವ್ಯಪೋಹತಿ||**

(ಮನುಸ್ಮೃತಿ, ೧೧-೧೭೮)

ಮೂರು ವರ್ಷಗಳ ಕಾಲ ತಾನೊಬ್ಬ ಶೂದ್ರಸ್ತ್ರೀಯ ಅಸಹಾಯಕತೆಯನ್ನು ದುರುಪಯೋಗ ಪಡಿಸಿಕೊಂಡು ಅಪರಾಧ ಮಾಡಿದ್ದೇನೆ ಎಂದು ತನ್ನ ಪಾಪವನ್ನು ಗಟ್ಟಿಯಾಗಿ ಹೇಳುತ್ತ, ಭಿಕ್ಷೆಯನ್ನು ಬೇಡಿ ಆ ಭಿಕ್ಷಾನ್ನದಿಂದಲೇ ಬದುಕುತ್ತ, ಗಾಯತ್ರೀಮಂತ್ರವನ್ನು ಜಪಿಸುತ್ತ ಬದುಕಬೇಕು. ಇದು ಕೇವಲ ಒಂದು ರಾತ್ರಿ ಮಾತ್ರ ಅಬಲೆಯಾದ ಶೂದ್ರಸ್ತ್ರೀಯನ್ನು ಕೂಡಿದವರು ಮಾಡಿಕೊಳ್ಳಬೇಕಾದ ಪ್ರಾಯಶ್ಚಿತ್ತ. ಹಗಲು ಕೂಡಿದರೆ, ಇನ್ನಷ್ಟು ಹೆಚ್ಚು. ಅನೇಕ ಬಾರಿ ಕೂಡಿದರೆ ಪ್ರಾಯಶ್ಚಿತ್ತವೇ ಇಲ್ಲ.

ಹೀಗೆ, ಪ್ರಾಯಶ್ಚಿತ್ತದಲ್ಲಿ ಮಂತ್ರಗಳ ಜಪವನ್ನೂ ಹೇಳಿದ್ದಾರೆ. ಅಂದ ಮೇಲೆ ಮೈಲಿಗೆಯಲ್ಲಿ ಮಂತ್ರಜಪ ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರವೂ ಸರಳವಿದೆ — ತಂದೆ ತಾಯಿಗಳು ಸತ್ತಾಗ ಮೈಲಿಗೆಯಿರುತ್ತದೆ.

ವೇದಾದಿಗಳನ್ನು ಉಚ್ಚರಿಸುವ ಹಾಗಿಲ್ಲ. ಆದರೆ, ಅಂತ್ಯಕ್ರಿಯೆಯಲ್ಲಿ ವೇದಮಂತ್ರಗಳೇ ಇರುವದು. ಮೈಲಿಗೆಯಿದ್ದರೂ, ಅಪರಕರ್ಮ ಮಾಡುವಾಗ ಆ ಮಂತ್ರಗಳನ್ನು ಉಚ್ಚರಿಸುವ ಅಧಿಕಾರವಿದೆ. (ಆ ಅಧಿಕಾರವನ್ನು ನೀಡುವದಕ್ಕಾಗಿಯೇ ಅಂತ್ಯೇಷ್ಟಿಯಲ್ಲಿ ಒಂದು ಕ್ರಿಯೆಯಿದೆ.) ಹಾಗೆ, ಪಾಪವನ್ನು ಮಾಡಿದ ಬ್ರಾಹ್ಮಣನಿಗೆ ಪ್ರಾಯಶ್ಚಿತ್ತವನ್ನು ವಿಧಿಸುವ ಗುರುಗಳು ಈ ಮಂತ್ರವನ್ನು ಜಪಿಸು ಎಂದು ಅಧಿಕಾರ ನೀಡುತ್ತಾರೆ. ಸಪ್ತರ್ಷಿಗಳು ವಾಲ್ಮೀಕಿಗೆ ನೀಡಿದ ಹಾಗೆ.

ಆ ಮಂತ್ರವನ್ನು ಜಪಿಸಬೇಕಾದರೂ ಅವನು ಸ್ನಾನ ಮಾಡಿ ಮಡಿಯಲ್ಲಿಯೇ ಜಪಿಸಬೇಕು. ಅಷ್ಟರಿಂದ ಅವನು ‘ತನಗೆ’ ಮಾತ್ರ ಮಡಿಯಾಗುತ್ತಾನೆ. ಹೇಗೆ ಅಪರಕರ್ಮವನ್ನು ಮಾಡಬೇಕಾದರೆ ಕ್ರಿಯೆಯನ್ನು ಮಾಡಲು ಶುದ್ಧಿ ದೊರಕಿದರೂ ಆ ಶುದ್ಧಿಯಿಂದ ಅವನು ದೇವರಪೂಜೆ ಮುಂತಾದವನ್ನು ಮಾಡುವ ಹಾಗಿಲ್ಲವೋ, ಅಥವಾ ಇತರರಿಗೆ ಅವನು ಮಡಿಯಲ್ಲವೋ, ಹಾಗೆ, ಪಾಪಿಯಾದವನು ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾದರೆ

ಮಾತ್ರ ಅವನಿಗೆ ಅವನು ಮಡಿ. ಇನ್ನೊಬ್ಬರಿಗಲ್ಲ. ಶೂದ್ರರೂ ಸಹ ಅವನನ್ನು ಮುಟ್ಟುವ ಹಾಗಿಲ್ಲ. ಅವನೊಟ್ಟಿಗೆ ಇರುವ ಹಾಗಿಲ್ಲ.

ಹೀಗಾಗಿ ನಿರ್ಣಯವೇನೆಂದರೆ ಪಾಪಕರ್ಮಗಳನ್ನು ಮಾಡಿದವನು, ಅರ್ಥಾತ್ ಮನಸ್ಸಿನ ಶುದ್ಧಿಯಿಲ್ಲದವನು ಮಡಿಯಾಗುವದೇ ಇಲ್ಲ. ಶಾಸ್ತ್ರ ಹೇಳಿರುವ ಮಡಿಯೆಲ್ಲ ಮನಸ್ಸಿನ ಶುದ್ಧಿ ಇರುವ ಸಜ್ಜನರಿಗೆ ಮಾತ್ರ.

## ದೇಹವನ್ನು ಮಡಿ ಮಾಡುವ ಪ್ರಕ್ರಿಯೆ

ಇನ್ನು ಮಡಿಯಾಗುವ ಕ್ರಮವನ್ನು ತಿಳಿಯೋಣ.

ಮೊದಲಿಗೆ ಮನಸ್ಸಿನಲ್ಲಿ ದೇವರನ್ನು ನೆನೆಯಬೇಕು. ದೇವತೆಗಳನ್ನು ಗುರುಗಳನ್ನು ಸ್ಮರಿಸಬೇಕು. ಅವರನ್ನು ಪ್ರಾರ್ಥಿಸಿ ಸ್ನಾನಕ್ಕಾಗಿ ಸಂಕಲ್ಪವನ್ನು ಮಾಡಬೇಕು. ಸ್ನಾನ ಮಾಡಬೇಕಾದರೆ ಸ್ನಾನದ ನೀರಿನಲ್ಲಿ ಶ್ರೀಹರಿಯನ್ನು, ತೀರ್ಥಾಭಿಮಾನಿ ದೇವತೆಗಳನ್ನು ಚಿಂತಿಸಬೇಕು. ಗುರುಗಳ ಸ್ಮರಣೆಯನ್ನು ಮಾಡಬೇಕು. ಆ ನಂತರ ಸ್ನಾನ ಮಾಡಬೇಕಾದರೆ ಹೇಳಬೇಕಾದ ಮಂತ್ರಗಳನ್ನು

ಹೇಳುತ್ತ ಸ್ನಾನವನ್ನು ಮುಗಿಸಿ, ಮೈ ಒರೆಸಿಕೊಂಡು, ನೀರಿನಿಂದಲೇ ಊರ್ಧ್ವಪುಂಡ್ರಗಳನ್ನು ಧರಿಸಿ, ಆ ಸ್ನಾನ ಎಂಬ ಸತ್ಕರ್ಮವನ್ನು ಶ್ರೀಹರಿಗೆ ಸಮರ್ಪಿಸಬೇಕು. ಆಗ ನಾವು ಮಡಿಯಾಗುತ್ತೇವೆ.

**ಇಲ್ಲಿ, ಸ್ನಾನ ಮಾಡುವ ಪ್ರಕ್ರಿಯೆ ದೇಹದ್ದು. ಮಂತ್ರ ಹೇಳುವ ಪ್ರಕ್ರಿಯೆ ವಾಗಿಂದ್ರಿಯದ್ದು. ಸ್ಮರಣೆ ಮಾಡುವ ಮನಸ್ಸಿನದ್ದು.**

ಹರಿ-ಗುರು-ದೇವತೆಗಳ ಸ್ಮರಣೆಯಿಲ್ಲದ ಸ್ನಾನ ಕಾಕಸ್ನಾನ.  ಕಾಗೆ ನೀರಿನಲ್ಲಿ ಹೊರಳಾಡಿದಂತೆ.

ಮಂತ್ರ ಹೇಳದೇ ಮಾಡುವ ಸ್ನಾನ ಮಲಸ್ನಾನ. ಅದರಿಂದ ದೇಹದ ಕೊಳೆ ಹೋಗುತ್ತದೆಯಷ್ಟೇ ಹೊರತು, ಮಡಿಯಾಗುವದಿಲ್ಲ.

ಅರ್ಥವನ್ನು ತಿಳಿಯದೇ, ಅನುಸಂಧಾನ ಮಾಡದೇ ಮಂತ್ರವನ್ನು ಹೇಳಿ ಸ್ನಾನ ಮಾಡಿದರೂ ಮಡಿಯಾಗುವದಿಲ್ಲ. ಅದು ಕೇವಲ ಶ್ರಮದ ಸ್ನಾನವಷ್ಟೇ.   **“ಹೊರಗೆ ಮಿಂದು ಒಳಗೆ ಮೀಯದವರ ಕಂಡು ನೋಡಿ ನಗುತಿದ್ದ ನಮ್ಮ ಪುರಂದರವಿಠಲ”** ಎಂಬ ಪುರಂದರದಾಸರ

ಮಾತು **“ಜಲದೊಳಗೆ ಮುಳುಗಿದರೆ ತೊಲಗದಾ ಹೊಲೆಗೆಲಸವೀ ದೇಹ”** ಎಂಬ ಶ್ರೀ ಕನಕದಾಸರ ಮಾತು ಸ್ನಾನ ಮಾಡುವ ಸಂದರ್ಭದಲ್ಲಿ ನೆನಪಿಗೆ ಬರಬೇಕು. ಅಂತರ್ಯಾಮಿಯ ಚಿಂತನೆ ಮೂಡಬೇಕು.

ಮನಸ್ಸಿನಲ್ಲಿ ದೇವರನ್ನು ನೆನೆಯುತ್ತ, ಮಂತ್ರಗಳ ಅರ್ಥವನ್ನು ಅನುಸಂಧಾನ ಮಾಡುತ್ತ, (ಸ್ತ್ರೀಯರೂ ಉಚ್ಚರಿಸಬೇಕಾದ ಶ್ಲೋಕಗಳಿವೆ. ಸ್ನಾನದ ವಿಧಿಯಲ್ಲಿ ತಿಳಿಸುತ್ತೇನೆ) ತೀರ್ಥಾಭಿಮಾನಿದೇವತೆಗಳನ್ನು ನೆನೆಯುತ್ತ, ಗುರುಗಳ ಸ್ಮರಣೆ ಮಾಡುತ್ತ ಮಿಂದರೆ ಮಾತ್ರ ನಾವು ಮಡಿಯಾಗುತ್ತೇವೆ.

ಇನ್ನು ಬರಿಯ ಮನಸ್ಸಿನಲ್ಲಿ ಮಂತ್ರ ಹೇಳುತ್ತ ನೀರಿನಲ್ಲಿ ಮುಳುಗದೇ ಇದ್ದರೂ ಮಡಿಯಾಗುವದಿಲ್ಲ.

ಮಡಿಯಾಗಲು ಮಂತ್ರವೂ ಬೇಕು, ಜಲವೂ ಬೇಕು, ಮುಖ್ಯವಾಗಿ ಅನುಸಂಧಾನ ಬೇಕು.

ಜಲವಿಲ್ಲದ ಸ್ನಾನ - ಧ್ಯಾನಸ್ನಾನ - ವನ್ನು[1] ಶಾಸ್ತ್ರ ಹೇಳಿದೆಯಲ್ಲ ಎಂದರೆ, ಅದು ದಂತಧಾವನದ ನಂತರ, ಸ್ನಾನಕ್ಕಿಂತಲೂ ಮುಂಚೆ ಮಾಡುವ ಗಜೇಂದ್ರಮೋಕ್ಷಾದಿಗಳ ಪಾರಾಯಣಕ್ಕೆ ಶುದ್ಧಿಯನ್ನು ಗಳಿಸಿಕೊಡುವಂತಹುದ್ದು. ಅಷ್ಟೇ ಅಲ್ಲ, ಜೀವವನ್ನು ಸಹ ಪವಿತ್ರಗೊಳಿಸುವ ಶ್ರೇಷ್ಠತಮ ಸ್ನಾನ. ಆದರೆ
ಆದರೆ, ದೇವರಪೂಜೆ, ಗುರುಗಳ ಸೇವೆ, ಭೋಜನಾದಿ ಸತ್ಕರ್ಮಗಳನ್ನು ಮಾಡಬೇಕಾದರೆ ದೇಹವನ್ನೂ ಶುದ್ಧವಾಗಿಟ್ಟುಕೊಳ್ಳಲೇಬೇಕು.

ಕುಡಿಯುವ ನೀರಿನ ತಂಬಿಗೆ ಒಳಗೂ ಹೊರಗೂ ಶುದ್ಧವಾಗಿರಲೇಬೇಕು.  ಒಳಗಿನ ಶುದ್ಧಿ ಇದ್ದರೆ ಸಾಕು, ಹೊರಗಿನ ಶುದ್ಧಿ ನಡೆಯುತ್ತದೆ ಎನ್ನುವದು ತಪ್ಪು.

ಹೊರಗಿನ ಶುದ್ಧಿಗಿಂತ ಒಳಗಿನ ಶುದ್ಧಿ ದೊಡ್ಡದು, ಸಂಶಯವಿಲ್ಲ. ಒಳಗಿನಿಂದ ಶುದ್ಧಿಯಿಲ್ಲದಿದ್ದರೇ

---

[1] ಧ್ಯಾನಸ್ನಾನ ಎಂದರೆ, ಯೋಗಾಸನದಲ್ಲಿ ಕುಳಿತು ಶ್ರೀಹರಿಯ ಪಾದೋದಕದ ಚಿಂತನೆಯನ್ನು ಮಾಡಿ ಸ್ನಾನವನ್ನು ಮಾಡುವ ಶ್ರೇಷ್ಠ ಪ್ರಕ್ರಿಯೆ. ಸದಾಚಾರಸ್ಮೃತಿಯ ಅನುವಾದದಲ್ಲಿ ವಿಸ್ತೃತವಾಗಿ ವಿವರಿಸುತ್ತೇನೆ.

ಹೊರಗಡೆಯ ಶುದ್ಧಿಗೆ ಬೆಲೆಯೇ ಇಲ್ಲ, ಅದರಲ್ಲಿಯೂ ಸಂಶಯವಿಲ್ಲ. ಆದರೆ, ಒಳಗಡೆ ಶುದ್ಧಿಯಿದ್ದರೆ ಸಾಕು, ಹೊರಗಡೆಯ ಶುದ್ಧಿ ಬೇಡ, ಒಳಗಡೆ ಶುದ್ಧಿಯಿದ್ದರೆ ಸಾಕು ಎನ್ನುವದು ತಪ್ಪು.

ಹೊರಗೆ ಕೆಸರಿರುವ, ಒಳಗೆ ಶುದ್ಧವಿರುವ ಲೋಟದಲ್ಲಿ ನಾವೇ ನೀರು ಕುಡಿಯುವದಿಲ್ಲ, ಅಂದ ಮೇಲೆ ಶುದ್ಧ ಮನಸ್ಸಿನ ಅಶುದ್ಧ ದೇಹದ ವ್ಯಕ್ತಿಯ ಪೂಜೆಯನ್ನು ದೇವರು ಸ್ವೀಕರಿಸಬೇಕಾ?

ಎಲ್ಲದರ ಸಾರಾಂಶವಿಷ್ಟೆ —

**ದೇಹ ಮಡಿಯಾಗಬೇಕಾದರೆ ಮನಸ್ಸು ಮಡಿಯಾಗಬೇಕು.**
**ಮನಸ್ಸು ಮಡಿಯಾಗಬೇಕಾದರೆ ಹರಿಯ ನೆನಹಿರಬೇಕು.**

**ಕೊಳಚೆ ಮನಸ್ಸಿನ ವ್ಯಕ್ತಿ, ಪಾಪ ಮಾಡಿದ ವ್ಯಕ್ತಿ ಆ ಕೊಳಚೆ, ಪಾಪಗಳನ್ನು ಕಳೆದುಕೊಳ್ಳುವವರೆಗೆ ಮಡಿಯಾಗಲಾರ.**

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to **9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491